# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **185** |
| **ಸದಸ್ಯರ ಹೆಸರು** | **ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ** |
| **ಉತ್ತರಿಸಬೇಕಾದ ದಿನಾಂಕ** | **01.02.2021** |
| **ಉತ್ತರಿಸುವ ಸಚಿವರು** | **ಮಾನ್ಯ ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ)** |
| **ಪ್ರಶ್ನೆ** | **ಉತ್ತರ** |
| ಅ) ಸರ್ಕಾರದಿಂದ ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಎಷ್ಟು ಸ್ಟಾರ್ಟ್ ಅಪ್ ಸಂಸ್ಥೆಗಳಿಗೆ ಸಹಾಯಧನ ಹಾಗೂ ಇನ್ನಿತರ ಸೌಲಭ್ಯಗಳನ್ನು ನೀಡಲಾಗಿದೆ; (ವಿವರ ನೀಡುವುದು)<br>ಆ) ಇಲ್ಲಿಯವರೆಗೆ ಕರ್ನಾಟಕ ರಾಜ್ಯ ನಿವಾಸಿಗಳ ಎಷ್ಟು ಸ್ಟಾರ್ಟ್ ಅಪ್ ಸಂಸ್ಥೆಗಳಿಗೆ ಸಹಾಯಧನ ನೀಡಲಾಗಿದೆ:<br>ಇ) ಸದರಿ ಸ್ಟಾರ್ಟ್ ಅಪ್ ಸಂಸ್ಥೆಗಳಿಂದ ಸ್ಥಳೀಯರಿಗೆ ಒದಗಿಸಲಾದ ಉದ್ಯೋಗಗಳ ಸಂಖ್ಯೆ ಎಷ್ಟು; ಎಲಿಮೇಟೆಡ್ 100 ಯೋಜನೆಯಡಿ ಕಳೆದ 10 ವರ್ಷಗಳ ಅವಧಿಯಲ್ಲಿ ಸರ್ಕಾರದಿಂದ ನೀಡಿರುವ ಅನುದಾನವೆಷ್ಟು? | ಕರ್ನಾಟಕ ಸ್ಟಾರ್ಟ್‌ಅಪ್ ನೀತಿಯನ್ನು 2015 ವರ್ಷದ ಕೊನೆಯಲ್ಲಿ ಜಾರಿಗೆ ತರಲಾಗಿದೆ. ಈ ನೀತಿಯಡಿಯಲ್ಲಿ, ಐಡಿಯಾ2ಪಿಓಸಿ ಕಾರ್ಯಕ್ರಮದಡಿ, ಎಲಿವೇಟ್-100, ಎಲಿವೇಟ್-ಉನ್ನತಿ ಹಾಗೂ ಅಂತಹ ಇನ್ನಿತರ ಕಾರ್ಯಕ್ರಮಗಳಡಿ ಕಳೆದ 5 ವರ್ಷಗಳಲ್ಲಿ, ಒಟ್ಟು 523 ನವೋದ್ಯಮಗಳಿಗೆ ಆರ್ಥಿಕವಾಗಿ ಅಥವಾ ಇನ್ನಿತರ ರೀತಿಯಲ್ಲಿ ಬೆಂಬಲಿಸಲಾಗಿರುತ್ತದೆ. ಈ ಎಲ್ಲ ನವೋದ್ಯಮಗಳು ಕರ್ನಾಟಕದಲ್ಲಿ ನೆಲೆಯಿರುವಂಥವಾಗಿರುತ್ತವೆ. 489 ನವೋದ್ಯಮಗಳು ರೂ.116 ಕೋಟಿಗಳಷ್ಟು ಸರ್ಕಾರದ ಅನುದಾನವನ್ನು ಪಡೆದುಕೊಂಡಿದ್ದು, ಇನ್ನಿತರ 34 ನವೋದ್ಯಮಗಳು - ಪೇಟೆಂಟ್ ಗಾಗಿ ತಗಲಿದ ವೆಚ್ಚದ ಮರುಪಾವತಿ, ಮಾರುಕಟ್ಟೆಗಾಗಿ ಪ್ರೋತ್ಸಾಹಕ, ಜಿ.ಎಸ್.ಟಿ. ಹಿಂಪಾವತಿ ಮತ್ತಿತರ ಸೌಲಭ್ಯಗಳ ಪ್ರೋತ್ಸಾಹಕಗಳಾಗಿ ಅಂದಾಜು ರೂ.55.00 ಲಕ್ಷಗಳಷ್ಟು ಮೊತ್ತವನ್ನು ಪಡೆದುಕೊಂಡಿವೆ. ಸುಮಾರು 5,000 ಸ್ಥಳೀಯ ಉದ್ಯೋಗಿಗಳಿಗೆ ಸದರಿ ನವೋದ್ಯಮ ಸಂಸ್ಥೆಗಳಿಂದ ಉದ್ಯೋಗವನ್ನು ನೀಡಲಾಗಿದೆ. |

(ಐಟಿಬಿಟಿ 04 ಎಲ್‌ಸಿಎಂ 2021)

**(ಡಾ|| ಅಶ್ವಥ್ ನಾರಾಯಣ್ ಸಿ.ಎನ್)**
ಉಪಮುಖ್ಯಮಂತ್ರಿಗಳು ಹಾಗೂ ವಿದ್ಯುನ್ಮಾನ
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ
ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು.